**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 164 /2020

ಸಿಡಬ್ಲ್ಯೂ-4/ ಪಿಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರೇಖಾ |
| ಗಂಡನ ಹೆಸರು | ಃ | ಫಕ್ಕಿರೇಶ ಸುಂಕಪಾಳ |
| ವಯಸ್ಸು | ಃ | 38 ವರ್ಷ |
| ವೃತ್ತಿ | ಃ | ಮನೆ ಕೆಲಸ |
| ವಾಸ್ತವ್ಯ | ಃ | ಲಕ್ಕೊಳ್ಳಿ , ಮುಂಡಗೋಡ |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 06-04-2024.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ಚಾಸಾ 1 ರವರು ನನ್ನ ಪತಿ. ಚಾಸಾ 5 ರವರ ಪರಿಚಯ ಇದೆ. ಆರೋಪಿತನು ನಮ್ಮ ಜಮೀನಿನ ಪಕ್ಕದ ಜಮೀನಿನ ಮಾಲೀಕರು. ದಿಃ 09-04-2020 ರಂದು ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಮಾವಿನ ತೋಟದ ಮಾವಿನ ಮರಗಳ ಕಡಿದ ಟೊಂಗೆಗಳನ್ನು ಕೂಡಿ ಹಾಕುತ್ತಿದ್ದಾಗ ಆರೋಪಿತನು ನನ್ನನ್ನು ಕೈಮಾಡಿ ಕರೆದಿರುತ್ತಾನೆ ಮತ್ತು ಕಣ್ಣು ಸನ್ನೆ ಮಾಡಿ ಕರೆದು, ನನ್ನೊಂದಿಗೆ ಅಸಭ್ಯವಾಗಿ ನಡೆದುಕೊಂಡಿರುತ್ತಾನೆ. ಆಗ ಚಾಸಾ 1 ರವರು ಆರೋಪಿತನ ಕೃತ್ಯವನ್ನು ನೋಡಿ ಆರೋಪಿತನಿಗೆ ವಿಚಾರಿಸಿದ್ದಕ್ಕೆ ಆರೋಪಿತನು ಚಾಸಾ 1 ರವರಿಗೆ ಅವಾಚ್ಯವಾಗಿ ಸೂಳೆ ಮಗನೇ, ಬೋಳಿ ಮಗನೇ ಎಂದು ಬೈದು, ಚಾಸಾ 1 ರವರಿಗೆ ಕೋಲಿನಿಂದ ಬಡೆದಿರುತ್ತಾನೆ. ಆಗ ನಾನು ಮತ್ತು ಚಾಸಾ 5 ರವರು ಸೇರಿ ಜಗಳವನ್ನು ಬಿಡಿಸಿರುತ್ತೇವೆ. ನಂತರ ಪೋಲಿಸರಿಗೆ ದೂರನ್ನು ದಾಖಲಿಸಿದ್ದು ಅವರು ಸ್ಥಳಕ್ಕೆ ಬಂದು ಘಟನೆಯ ಕುರಿತು ವಿಚಾರಿಸಿರುತ್ತಾರೆ. ಘಟನೆಯ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಘಟನೆ ನಡೆದಾಗ ಸಮಯ 11 ಗಂಟೆ 30 ನಿಮಿಷ ಆಗಿತ್ತು. ಆ ದಿನ ಹಲ್ಲೆ ಮಾಡಿದ ವ್ಯಕ್ತಿಯು ಈ ದಿನ ನ್ಯಾಯಾಲಯದಲ್ಲಿ ಇರುವವನು ಆಗಿರುತ್ತಾನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಡಿಗೆಯನ್ನು ನೋಡಿ ಗುರುತಿಸಿದ್ದು ಆರೋಪಿತನು ಆ ಬಡಿಗೆಯಿಂದಲೇ ಚಾಸಾ 1 ರವರನ್ನು ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸದ್ರಿ ಬಡಿಗೆಯನ್ನು ಎಂ.ಓ. 1 ಎಂದು ಗುರುತಿಸಲಾಯಿತು.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.</u>**

ಆರೋಪಿತನು ಗುನ್ಹಾ ಸ್ಥಳದಿಂದ ಹೋಗುವಾಗ ತನ್ನ ಕೈಯಲ್ಲಿದ್ದ ಕೋಲನ್ನು ಅಲ್ಲಿಯೇ ಎಸೆದು, ಚಾಸಾ 1 ರವರಿಗೆ ಇನ್ನೊಮ್ಮೆ ಸಿಕ್ಕಲ್ಲಿ ನಿನ್ನನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವದ ಬೆದರಿಕೆಯನ್ನು ಹಾಕಿ ಹೋಗಿರುತ್ತಾನೆ ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ.ಎ.ಎನ್. ರವರು ಗೈರು ಹಾಜರಿದ್ದು ಅವರ ಪರವಾಗಿ ಎಂ.ಎಸ್.ಆರ್. ವಕೀಲರು ಕಾಲಾವಕಾಶ ಕೋರಿದ್ದರಿಂದ ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

**ಪ್ರ.ದ.ನ್ಯಾ.ದಂ. ಮುಂಡಗೋಡ.**